ಏಕಾಗ್ರತೆಯ ಕಥೆಗಳು

ಸಂಗ್ರಹ: **ಡಾ. ಇ. ವಸಂತಕುಮಾರ್**



'ಹಕ್ಕಿಯ ತಲೆ ಮಾತ್ರ ಕಾಣುತ್ತದೆ'

ದ್ರೋಣಾಚಾರ್ಯರು ಕೌರವರು ಮತ್ತು ಪಾಂಡವರಿಗೆ ಧನುರ್ವಿದ್ಯಾಗುರುಗಳು. ಧನುರ್ವಿದ್ಯೆಯಲ್ಲಿ ಪರಿಣತರಾದ ತಮ್ಮ ಶಿಷ್ಯರನ್ನು ಗುರಿ ಹೊಡೆಯುವುದರಲ್ಲಿ ಪರೀಕ್ಷಿಸಲು ದ್ರೋಣಾಚಾರ್ಯರು, ಶಿಲ್ಪಿಯಿಂದ ಒಂದು ಕೃತಕವಾದ ಪಕ್ಷಿಯನ್ನು ಮಾಡಿಸಿ ಶಿಷ್ಯರಿಗೆ ತಿಳಿಯದಂತೆ ಅದನ್ನು ಒಂದು ಮರದ ಕೊಂಬೆಯ ತುದಿಗೆ ಕಟ್ಟಿಸಿದರು. ಎಲ್ಲರನ್ನೂ ಕರೆದು, ''ಬಾಲಕರೇ, ನೀವು ನಿಮ್ಮ ನಿಮ್ಮ ಬಿಲ್ಲುಬಾಣಗಳನ್ನು ತನ್ನಿ. ಈ ಮರಕ್ಕೆ ಎದುರಾಗಿ ನಿಂತುಕೊಳ್ಳಿ. ನಾನು ಹೇಳಿದಾಗ, ಅಗೋ ಆ ಹಕ್ಕಿಯ ತಲೆಗೆ ಹೊಡೆದು ಅದನ್ನು ಬೀಳಿಸಬೇಕು. ಒಬ್ಬೊಬ್ಬರಾಗಿ ನಿಮ್ಮನ್ನು ಕರೆಯುತ್ತೇನೆ'' ಎಂದು ಹೇಳಿದರು. ಮೊದಲು ಯುಧಿಷ್ಠಿರನನ್ನು ಕರೆದು, ''ಯುಧಿಷ್ಠಿರ! ಬಾಣವನ್ನು ಬಿಲ್ಲಿಗೆ ಹೂಡಿ ಸಿದ್ಧನಾಗು. ನಾನು ಹೇಳಿದಾಗ ಬಿಡು'' ಎಂದರು. ಒಂದು ಕ್ಷಣ ಬಿಟ್ಟು, ''ನಿನಗೆ ಮರದ ತುದಿಯಲ್ಲಿರುವ ಹಕ್ಕಿ ಕಾಣುತ್ತದೆಯೆ?'' ಎಂದು ದ್ರೋಣಾಚಾರ್ಯರು ಕೇಳಿದರು. ಯುಧಿಷ್ಠಿರನು ಹೌದೆಂದನು. ದ್ರೋಣರು ಇನ್ನೊಂದು ಕ್ಷಣ ಬಿಟ್ಟು, ''ಆ ಮರ, ನಾನು, ನಿನ್ನ ತಮ್ಮಂದಿರು, ಎಲ್ಲಾ ಕಾಣುತ್ತದೆಯೊ?'' ಎಂದು ಕೇಳಿದರು. ''ಹೌದು, ಎಲ್ಲವೂ ಎಲ್ಲರೂ ಕಾಣುತ್ತಿದ್ದಾರೆ'' ಎಂದ. ಮತ್ತೆ ಮತ್ತೆ ಇದೇ ಉತ್ತರ ಬಂದಿತು. ದ್ರೋಣರು ಅಸಂತುಷ್ಟರಾಗಿ, ''ನಿನ್ನಿಂದ ಈ ಲಕ್ಷ್ಯವನ್ನು ಭೇದಿಸುವುದು ಸಾಧ್ಯವಿಲ್ಲ'' ಎಂದು ಅವನನ್ನು ಕಳುಹಿಸಿ

ಬಿಟ್ಟರು. ನಂತರ ದುರ್ಯೋಧನ ಮುಂತಾದವರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಕರೆದು ಕೇಳಿದರು. ಎಲ್ಲರೂ ಹಾಗೆಯೇ ಉತ್ತರ ಕೊಟ್ಟರು. ಅನಂತರ ಅರ್ಜುನನನ್ನು ಕರೆದು, ''ನೀನು ಇದನ್ನು ಹೊಡೆಯಬೇಕು. ಬಿಲ್ಲನ್ನು ಬಗ್ಗಿಸಿ ಸಿದ್ಧನಾಗು. 'ಬಿಡು' ಎಂದಾಗ ಬಾಣ ಬಿಡಬೇಕು'' ಎಂದರು. ಅರ್ಜುನ ಬಿಲ್ಲನ್ನು ಗುಂಡಾಗಿ ಬಗ್ಗಿಸಿ ಲಕ್ಷ್ಯವನ್ನು ನೋಡುತ್ತ ನಿಂತ. ಒಂದು ಕ್ಷಣ ಬಿಟ್ಟು ಮಿಕ್ಕವರನ್ನು ಕೇಳಿದಂತೆ ದ್ರೋಣರು, ''ಆ ಹಕ್ಕಿಯನ್ನೂ ಮರವನ್ನೂ ನನ್ನನ್ನೂ ನೋಡುತ್ತಿದ್ದೀಯೊ?'' ಎಂದು ಕೇಳಿದರು. ಅರ್ಜುನ, ''ಪಕ್ಷಿ ಮಾತ್ರ ಕಾಣುತ್ತದೆ, ಮರವಾಗಲೀ ನೀವಾಗಲೀ ಕಾಣುವುದಿಲ್ಲ'' ಎಂದು ಉತ್ತರವಿತ್ತನು. ದ್ರೋಣಾಚಾರ್ಯರಿಗೆ ಸಂತೋಷವಾಯಿತು. ಮತ್ತೊಂದು ಕ್ಷಣ ಬಿಟ್ಟು, ''ಹಕ್ಕಿ ಕಾಣುತ್ತದೆಯೊ? ಇನ್ನೊಂದು ಸಲ ಹೇಳು'' ಎಂದರು. ಅರ್ಜುನ, ''ಹಕ್ಕಿಯ ತಲೆ ಮಾತ್ರ ಕಾಣುತ್ತದೆ, ಅದರ ಮೈ ಕಾಣುವುದಿಲ್ಲ'' ಎಂದನು. ದ್ರೋಣಾಚಾರ್ಯರಿಗೆ ಅತ್ಯಂತ ಸಂತೋಷವಾಯಿತು. ರೋಮಾಂಚನಗೊಂಡು ''ಬಿಡು, ಬಾಣವನ್ನು'' ಎಂದರು. ಅರ್ಜುನ ಬಾಣ ಬಿಟ್ಟನು. ಹರಿತವಾದ ಬಾಣ ಥಟ್ಟನೆ ಹಕ್ಕಿಯ ತಲೆಯನ್ನು ಕತ್ತರಿಸಿ ಕೆಡವಿತು. ಜಯಶೀಲನಾದ ಅರ್ಜುನನನ್ನು ದ್ರೋಣಾಚಾರ್ಯರು ಆಲಂಗಿಸಿಕೊಂಡರು.

ಧ್ಯಾನದ ಆಟ

ಬಾಲಕ ನರೇಂದ್ರ (ನಂತರ ಸ್ವಾಮಿ ವಿವೇಕಾನಂದರು) ತನ್ನ ಸಂಗಡಿಗರೊಂದಿಗೆ ಆಡುತ್ತಿದ್ದ ಆಟಗಳಲ್ಲೊಂದು, ಧ್ಯಾನ ಮಾಡುವುದು. ಒಮ್ಮೆ ಓರಗೆಯ ಹುಡುಗರೊಂದಿಗೆ ಧ್ಯಾನ ಮಾಡಲು ಕುಳಿತ. ಸ್ವಲ್ಪ ಹೊತ್ತಿಗೆ ಒಂದು ಹಾವು ಅಲ್ಲಿ ಕಂಡಿತು. ಭಯದಿಂದ ಹುಡುಗರೆಲ್ಲಾ ಎದ್ದು ಓಡಿದರು. ಆದರೆ ನರೇಂದ್ರನು ಇದರ ಪರಿವೆಯಿಲ್ಲದೆ ಧ್ಯಾನಮಗ್ನನಾಗಿದ್ದನು. ಹುಡುಗರು ಎಷ್ಟು ಕಿರಿಚಿದರೂ ಅವನು ಕದಲಲಿಲ್ಲ. ಆ ಹುಡುಗರ ಪೈಕಿ ಧೈರ್ಯಶಾಲಿಯಾದವನೊಬ್ಬ ನರೇಂದ್ರನ ಹತ್ತಿರ ಬಂದು ಹಾವು ಬರುತ್ತಿದೆ, ಬೇಗ ಎದ್ದು ಓಡು ಎಂದು ಹೇಳಿ ಕೂಡಲೆ ಅಲ್ಲಿಂದ ಕಾಲು ಕಿತ್ತನು. ನರೇಂದ್ರನಿಗೆ ಇದಾವುದೂ ತಿಳಿಯಲಿಲ್ಲ. ಹಾವು ನರೇಂದ್ರನ ಬಳಿ ಬಂದರೂ ಏನೂ ತೊಂದರೆ ಮಾಡದೆ ಹೊರಟುಹೋಯಿತು. ಸ್ವಲ್ಪ ಸಮಯದ ನಂತರ ನರೇಂದ್ರ ಧ್ಯಾನದಿಂದ ಎಚ್ಚೆತ್ತನು. ಆಗ ಹುಡುಗರು, ''ಹಾವು ಬಂದರೂ ಹೆಡೆಯೆತ್ತಿದರೂ, ನಾವೆಲ್ಲಾ ಅಷ್ಟು ಕಿರಿಚಿದರೂ ನೀನು ಓಡಿಹೋಗದೆ ಸುಮ್ಮನಿದ್ದೆಯಲ್ಲಾ, ಅದೇಕೆ?'' ಎಂದು ನರೇಂದ್ರನನ್ನು ಪ್ರಶ್ನಿಸಿದರು. ಆಗ ಅವನು, ''ನನಗೆ ಅದಾವುದೂ ತಿಳಿಯಲಿಲ್ಲ, ನಾನೊಂದು ಅವರ್ಣನೀಯ ಆನಂದವನ್ನು ಅನುಭವಿಸುತ್ತಿದ್ದೆ'' ಎಂದು ಹೇಳಿದನು. ಆಗ



ಸ್ವಾಮೀಜಿಯವರ ಮನಸ್ಸು ಸಂಪೂರ್ಣ ಧ್ಯಾನದಲ್ಲಿ ಏಕಾಗ್ರಗೊಂಡಿತ್ತು.

ಬೆಸ್ತ ಮತ್ತು ಏಕಾಗ್ರತೆ

ಒಬ್ಬ ಒಂಟಿಯಾಗಿ, ಒಂದು ಕೆರೆಯ ದಡದಲ್ಲಿ ಕುಳಿತು ಮೀನು ಹಿಡಿಯುತ್ತಿದ್ದ. ಗಾಳವನ್ನು ಬೀಸಿದ ಎಷ್ಟೋ ಹೊತ್ತಿನ ಮೇಲೆ ಗಾಳದ ಬೆಂಡು ಅಲುಗಲಾರಂಭಿಸಿತು. ಬೆಂಡು ಒಮ್ಮೊಮ್ಮೆ ನೀರಿನೊಳಕ್ಕೆ ಸ್ವಲ್ಪ ಸ್ವಲ್ಪ ಮುಳುಗುತ್ತಿತ್ತು. ಮೀನು ಹಿಡಿಯುವವನು ಅದನ್ನು ಗಮನಿಸಿ ಗಾಳದ ಕಡ್ಡಿಯನ್ನು ಮೇಲೆತ್ತಲು ಸಿದ್ಧನಾಗುತ್ತಿದ್ದ. ಆ ಸಮಯಕ್ಕೆ ಒಬ್ಬ ದಾರಿಹೋಕ ಅವನ ಹತ್ತಿರ ಬಂದು, ''ಬ್ಯಾನರ್ಜಿ ಅವರ ಮನೆ ಎಲ್ಲಿದೆ ಗೊತ್ತಿದೆಯೆ?'' ಎಂದು ಕೇಳಿದ. ಮೀನಿನವನು ಗಾಳದ ಕಡ್ಡಿಯನ್ನು ಮೇಲೆ ಎತ್ತುವುದರಲ್ಲಿ ಮಗ್ನನಾಗಿದ್ದ. ಈತನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. ದಾರಿಹೋಕ ಮತ್ತೆ ಮತ್ತೆ ದನಿ ಏರಿಸಿ, ''ಅವರ ಮನೆ ಎಲ್ಲಿದೆ ಎಂಬುದು ನಿನಗೆ ಗೊತ್ತಿದೆಯೆ?'' ಎಂದು ಕೇಳಿದ. ಮೀನು ಹಿಡಿಯುವವನಿಗೆ ಮತ್ತಾವುದರ ಮೇಲೂ ಪ್ರಜ್ಞೆ ಇಲ್ಲ. ಅವನ ಕೈ ಸುಮ್ಮನೆ ನಲುಗುತ್ತಿತ್ತು. ಅವನ ದೃಷ್ಟಿಯೆಲ್ಲಾ ಬೆಂಡಿನ ಕಡೆಗೇ ಇತ್ತು. ಇದನ್ನು ನೋಡಿ ದಾರಿಹೋಕ ಬೇಸರಗೊಂಡು ಅಲ್ಲಿಂದ ಹೊರಟುಹೋದ. ಆತ ಸಾಕಷ್ಟು ದೂರ ಹೋದ ಮೇಲೆ, ಬೆಂಡು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿತು. ಮೀನು

ಹಿಡಿಯುತ್ತಿದ್ದವ ತಕ್ಷಣ ಗಾಳದ ಕಡ್ಡಿಯನ್ನು ಮೇಲಕ್ಕೆ ಎತ್ತಿ ಮೀನನ್ನು ದಡಕ್ಕೆ ಹಾಕಿದ. ಬಳಿಕ ಮುಖದ ಬೆವರನ್ನು ಒರೆಸಿ ಕೊಂಡು ಅವನು ಆ ದಾರಿಹೋಕನನ್ನು ಕೂಗಲಾರಂಭಿಸಿದ, ''ಯಾರ್ರೀ, ಏನ್ರೀ, ಯಾರು ಅಲ್ಲಿ ಹೋಗುತ್ತಾ ಇರುವುದು? ಬನ್ರೀ. ಇಲ್ಲಿ ಸ್ವಲ್ಪ ಬಂದು ಹೋಗ್ರೀ'' ಅಂತ. ದಾರಿಹೋಕನಿಗೆ ಹಿಂದಿರುಗಿ ಬರಲು ಇಚ್ಛೆ ಇಲ್ಲ. ಮೀನು ಹಿಡಿಯುವವ ಬಹಳ ವಾಗಿ ಕೂಗಿ ಕರೆದ ನಂತರ ಆತ ಹಿಂದಿರುಗಿ ಬಂದು ಕೇಳಿದ, ''ಏಕೆ ಸುಮ್ಮನೆ ಗಂಟಲು ಹರಿಯುವ ಹಾಗೆ ಕಿರಿಚು ತ್ತಿದ್ದೀಯೆ?'' ಅಂತ. ಆಗ ಮೀನು ಹಿಡಿಯುವವ ಕೇಳಿದ, ''ನನ್ನನ್ನು ಏನು ಕೇಳುತ್ತಿದ್ದಿರಿ?'' ಅಂತ. ದಾರಿಹೋಕ ಹೇಳಿದ, ''ಆಗ ನಿನ್ನನ್ನು ಎಷ್ಟೊಂದು ಸಲ ಕೇಳಿದೆ. ಈಗ ನೀನು ನನ ಗೇನು ಬೇಕು ಅಂತ ಕೇಳುತ್ತಾ ಇದ್ದೀಯಲ್ಲ!'' ಬಳಿಕ ಮೀನು ಹಿಡಿಯುವವ ಹೇಳಿದ, ''ಆಗ ನನ್ನ ಗಾಳದ ಬೆಂಡು ಇನ್ನೇನು ಮುಳುಗುವುದರಲ್ಲಿತ್ತು. ಆದ ಕಾರಣ ನೀವು ಕೇಳಿದ ಪ್ರಶ್ನೆಯ ಒಂದು ಪದವೂ ನನ್ನ ಕಿವಿಗೆ ಬೀಳಲಿಲ್ಲ'' ಎಂದು.

ನಿಜವಾದ ಏಕಾಗ್ರತೆಯೆಂದರೆ ಇದು. ತನ್ನ ಸುತ್ತಮುತ್ತ ಏನು ನಡೆಯುತ್ತಿದ್ದರೂ ಅದಾವುದರ ಕಡೆಗೂ ಅವನ ಗಮನ ಇರದು.

ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮೀಜಿ

ನ್ಯೂಯಾರ್ಕ್ ಸಮೀಪದ ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮೀಜಿ ಕಳೆದ ಕೊನೆಯ ದಿನದ ಘಟನೆ ಅದ್ಭುತವೂ ಪ್ರಶಸ್ತವೂ ಆಗಿದೆ. ಮಧ್ಯಾಹ್ನದ ಊಟವಾದ ನಂತರ ಸ್ವಾಮೀಜಿ ಎಂದಿನಂತೆ ಅಡ್ಡಾಡಲು ಹೊರಟರು. ಕೊನೆಯ ದಿನವಾದ ಇಂದು ಸ್ವಾಮೀಜಿ ತಮ್ಮ ಶಿಷ್ಯೆಯರಾದ ಕ್ರಿಸ್ಟೈನ್ ಮತ್ತು ಫುಂಕೆಯವರನ್ನು ತಮ್ಮ ಜತೆಗೆ ಸುತ್ತಾಡಲು ಕರೆದರು. ಮೂವರೂ ಒಂದು ಗುಡ್ಡದ ಮೇಲಕ್ಕೆ ಸುಮಾರು ಅರ್ಧ ಮೈಲಿ ಹತ್ತುತ್ತಾ ನಡೆದರು. ಪ್ರದೇಶವೆಲ್ಲಾ ಮರಗಳಿಂದ ಕೂಡಿ ನಿರ್ಜನವಾಗಿತ್ತು. ಕೊನೆಗೆ, ಕೊಂಬೆಗಳು ಬಹಳ ಕೆಳಗೆ ಇಳಿ ಬಿದ್ದಿದ್ದ ಓಕ್ ಮರವೊಂದನ್ನು ಸ್ವಾಮೀಜಿ ಆರಿಸಿದರು. ಕೆಳಗೆ ಹರಡಿದ್ದ ರೆಂಬೆಗಳ ಕೆಳಗೆ ಎಲ್ಲರೂ ಕುಳಿತರು. ಸ್ವಾಮೀಜಿ ತಮ್ಮೊಂದಿಗೆ ಮಾತನಾಡುತ್ತಾರೆ ಎಂದು ಅವರಿಬ್ಬರೂ ನಿರೀ ಕ್ಷಿಸುತ್ತಿದ್ದರು. ಇದ್ದಕ್ಕಿದ್ದಂತೆ ಸ್ವಾಮೀಜಿ, ''ನಾವು ಈಗ ಧ್ಯಾನ ಮಾಡೋಣ! ಬೋಧಿವೃಕ್ಷದ ಅಡಿಯಲ್ಲಿ ಕುಳಿತ ಬುದ್ಧನಂತಾ ಗೋಣ!'' ಎಂದರು. ಸ್ವಾಮೀಜಿ ಕಂಚಿನ ಪ್ರತಿಮೆಯಂತೆ ನಿಶ್ಚಲರಾದರು. ಸ್ವಲ್ಪ ಹೊತ್ತಿಗೆ ಗುಡುಗು, ಮಿಂಚು ಪ್ರಾರಂಭ ವಾಯಿತು. ಮಳೆ ಸುರಿಯಿತು. ಸ್ವಾಮೀಜಿಯವರ ಗಮನಕ್ಕೆ ಇದಾವುದೂ ಬರಲೇ ಇಲ್ಲ! ಫುಂಕೆಯವರು ತಮ್ಮ ಕೊಡೆ ಯನ್ನು ಸ್ವಾಮೀಜಿಯವರ ಮೇಲೆ ಹಿಡಿದು ಮಳೆಯಿಂದ ಅವರನ್ನು ರಕ್ಷಿಸಲು ಸಾಧ್ಯವಾದಷ್ಟೂ ಪ್ರಯತ್ನಿಸಿದರು. ಧ್ಯಾನ ಮಗ್ನರಾಗಿದ್ದ ಸ್ವಾಮೀಜಿಗೆ ಇದಾವುದರ ಪರಿವೆಯೂ ಇರ ಲಿಲ್ಲ! ದೂರದಲ್ಲಿ ಕೂಗುಗಳು ಕೇಳಿಬಂದವು. ಉಳಿದವರು ಅವರನ್ನು ಹುಡುಕಿಕೊಂಡು ಕೊಡೆ ಮತ್ತು ಮಳೆ-ಅಂಗಿ ಗಳೊಂದಿಗೆ ಬಂದರು. ಸ್ವಾಮೀಜಿ ವಿಷಾದದ ನೋಟದಿಂದ ಸುತ್ತಲೂ ನೋಡಿದರು, ಏಕೆಂದರೆ ಅವರು ಹೋಗಲೇಬೇಕಾ ಗಿತ್ತು. ಅವರೆಂದರು, ''ನಾನೇನು, ಮತ್ತೊಮ್ಮೆ ಮಳೆಗಾಲದ ಕಲ್ಕತ್ತೆಯಲ್ಲಿರುವೆನೆ?''